ಬೀದರ್ ಜಿಲ್ಲೆಯ ಕಾರಂಜಾ ನೀರಾವರಿ ಯೋಜನೆಯ ವಿವರ

5(22): ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಕಾರಂಜಾ ನೀರಾವರಿ ಯೋಜನೆ ಈಗ ಯಾವ ಹಂತದಲ್ಲಿದೆ; ಈ ಯೋಜನೆಯನ್ನು ಪ್ರಾರಂಭಿಸುವಾಗ ಇದರ ಅಂದಾಜು ವೆಚ್ಚವೆಷ್ಟಿತ್ತು; ಹಾಗೂ ಇಲ್ಲಿಯವರೆಗೆ ಈ ಯೋಜನೆಯ ಅನುಷ್ಠಾನಕ್ಕಾಗಿ ವೆಚ್ಚ ಮಾಡಿರುವ ಹಣವೆಷ್ಟು?

ಆ) ನೂರಾರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದರೂ ಸಹ ಈ ನೀರಾವರಿ ಯೋಜನೆಯು ಇಲ್ಲಿವರೆವಿಗೂ ಪೂರ್ಣಗೊಳ್ಳದೇ ಇರಲು ಕಾರಣಗಳೇನು?

ಇ) ಈ ಯೋಜನೆಯ ಅನುಷ್ಠಾನದಲ್ಲಿ ಇಲ್ಲಿಯವರೆಗೆ ಎಷ್ಟು ಭ್ರಷ್ಟಾಚಾರದ ಹಣ ದುರುಪಯೋಗದ ಪ್ರಕರಣಗಳು ಪತ್ತೆಯಾಗಿವೆ; ಇದರಲ್ಲಿ ಭಾಗಿಯಾಗಿರುವವರ ಹೆಸರು ವಿವರಗಳೇನು ಹಾಗೂ ಈ ಪೈಕಿ ಎಷ್ಟು ಜನರ ಮೇಲೆ ಶಿಸ್ತಿನ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಈ) ಈ ಯೋಜನೆಯು ಪೂರ್ಣಗೊಳ್ಳಲು ಇನ್ನೂ ಎಷ್ಟು ಸಮಯದ ಅಗತ್ಯವಿದೆ; ಈ ಯೋಜನೆ ಪೂರ್ಣಗೊಂಡ ನಂತರ ಜಿಲ್ಲೆಯ ಯಾವ ಯಾವ ತಾಲ್ಲೂಕಿನ ಎಷ್ಟೆಷ್ಟು ಎಕರೆ ಪ್ರದೇಶಗಳಿಗೆ ನೀರಾವರಿ ಮತ್ತು ಕುಡಿಯುವ ನೀರಿನ ಸೌಲಭ್ಯ ದೊರಕಲಿದೆ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):

ಅ) ಬೀದರ್ ಜಿಲ್ಲೆಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಕಾರಂಜಾ ನೀರಾವರಿ ಯೋಜನೆಯ ಈಗಿರುವ ಹಂತದ ವಿವರಗಳನ್ನು ಈ ಕೆಳಗೆ ನೀಡಿದೆ.

1. ಅಣೆಕಟ್ಟು ಕಾಮಗಾರಿ ಪೂರ್ಣಗೊಂಡಿದ್ದು, ಜಲಾಶಯದಲ್ಲಿ ನೀರನ್ನು ಶೇಖರಿಸಲಾಗಿದೆ.

2. ಬಲದಂಡೆ ಕಾಲುವೆಯು 131 ಕಿಲೋ ಮೀಟರ್‌ವರೆವಿಗೂ ಪೂರ್ಣಗೊಂಡಿದೆ.

3. ಎಡದಂಡೆ ಕಾಲುವೆಯು 31 ಕಿ.ಮೀ. ವರೆಗೂ ಪೂರ್ಣಗೊಂಡಿದೆ.

4. ಪುನರ್ವಸತಿ ಕಾಮಗಾರಿಗಳು ಪೂರ್ಣಗೊಂಡಿವೆ.

5. ಕಾರಂಜಾ ಮುಂದಂಡೆ ಏತ ನೀರಾವರಿ ಯೋಜನೆಯ ಏರು ಕೊಳವೆ (Raisingmain) ಪುನಃಶ್ಚೇತನ ಕಾಮಗಾರಿಯನ್ನು ಕೈಗೆತ್ತಿ ಕೊಳ್ಳಲಾಗಿದೆ.

6. ಕಾರಂಜಾ ಏತ ನೀರಾವರಿ ಕಾಲುವೆಯನ್ನು 21 ಕಿ.ಮೀ. ವರೆಗೆ ನಿರ್ಮಿಸಲಾಗಿದೆ ಕಿಮೀ22, 23 ಹಾಗೂ 24 ರ ಕಾಮಗಾರಿಗಳು ಪ್ರಗತಿಯಲ್ಲಿವೆ.

7. ಅತಿವಾಳ ಏತ ನೀರಾವರಿ ಯೋಜನೆಯ ಹೆಡ್‌ವರ್ಕ್ ನಿರ್ಮಾಣ ಹಾಗೂ ಉತ್ತರ ಮುಖ್ಯ ಕಾಲುವೆ ಹಾಗೂ ದಕ್ಷಿಣ ಮುಖ್ಯ ಕಾಲುವೆಗಳ ನಿರ್ಮಾಣಕ್ಕಾಗಿ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

8. ನೀರು ಬಳಕೆದಾರರ ಸಹಕಾರ ಸಂಘಗಳು ಅಸ್ತಿತ್ವದಲ್ಲಿದೆ.

ಈ ಯೋಜನೆಯನ್ನು 1971–72 ರಲ್ಲಿ ಪ್ರಾರಂಭಿಸಲಾಗಿದ್ದು ಇದರ ಮೂಲ ಅಂದಾಜು ವೆಚ್ಚ 9.90 ಕೋಟಿ ರೂಗಳಾಗಿತ್ತು.

ಈ ಯೋಜನೆಯ ಅನುಷ್ಠಾನಕ್ಕಾಗಿ ನವೆಂಬರ್ 2010 ರವರೆಗೆ ರೂ.497.83 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಆ) ಯೋಜನೆಯನ್ನು ಪೂರ್ಣಗೊಳಿಸುವಲ್ಲಿ ಈ ಕೆಳಕಂಡ ಪ್ರಮುಖ ಕಾರಣಗಳಿಂದ ವಿಳಂಬವಾಗಿರುತ್ತದೆ.

1. ಯೋಜನೆಯ ಪ್ರಾರಂಭದಿಂದ 1972–73 ರಿಂದ 1995–96ರ ವರೆಗೆ AIBP ರಡಿ ಕೇಂದ್ರ ಸರ್ಕಾರದ ಸಹಾಯಧನ ದೊರಕುವವರೆಗೆ ರಾಜ್ಯ ಸರ್ಕಾರದಿಂದ ಈ ಯೋಜನೆಗೆ ಹಂಚಿಕೆಯಾದ ಕನಿಷ್ಠ ಅನುದಾನ.

2. ಮುಳುಗಡೆಯಾದ ಗ್ರಾಮಗಳಿಗೆ ಪುನರ್ವಸತಿ ಮತ್ತು ಪುನರ್ ನಿರ್ಮಾಣಕ್ಕಾಗಿ ಒಪ್ಪಿಗೆ ಪಡೆದು R&R (ಪುನರ್ವಸತಿ ಮತ್ತು ಪುನರ್ ನಿರ್ಮಾಣ) ಸಮಿತಿಯಿಂದ ಅನುಮೋದನೆಗೊಳಿಸುವಲ್ಲಿ ಆಗಿರುವ ಅನಿವಾರ್ಯ ವಿಳಂಬ.

3. ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿ ಆದ ವಿಳಂಬದಿಂದ ಗುತ್ತಿಗೆಯನ್ನು ರದ್ದುಗೊಳಿಸಿ, ಬಾಕಿ ಕೆಲಸಗಳಿಗಾಗಿ KTTP

ಯಲ್ಲಿನ ಕಾಲಾವಕಾಶಗಳನ್ವಯ ಮರು ಟೆಂಡರ್ ಪ್ರಕ್ರಿಯೆಯಲ್ಲಿ ಆದ ವಿಳಂಬ ಹಾಗೂ ಕೆಲವು ಪ್ರಕರಣಗಳಲ್ಲಿ ಗುತ್ತಿಗೆದಾರರು ಟೆಂಡರ್ ರದ್ಧತಿಯನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಿದ್ದರಿಂದ, ಪ್ರಕರಣ ಇತ್ಯರ್ಥವಾಗಿ ನ್ಯಾಯಾಲಯದ ಆದೇಶ ಹೊರಡಿಸುವವರೆಗೆ ಉಂಟಾದ ಅನಿವಾರ್ಯ ವಿಳಂಬ.

4. ನಿರ್ಮಾಣದ ಹಂತದಲ್ಲಿ ಕೆಲವು ವಿನ್ಯಾಸದ ಬದಲಾವಣೆಯಿಂದ ಉಂಟಾದ ಹೆಚ್ಚುವರಿ ಆರ್ಥಿಕ ಇಂಗಿತಾರ್ಥ ಹಾಗೂ ಕಾಲಾವಧಿ.

5. ಯೋಜನೆಗೆ ಕೇಂದ್ರ ಜಲ ಆಯೋಗದಲ್ಲಿ ಪರಿಶೀಲಿಸಿ ಅನುಮೋದನೆ ನೀಡುವಲ್ಲಿ ಆದ ವಿಳಂಬ.

6. ಯೋಜನೆಯ ಪ್ರಮುಖ ಭಾಗಗಳ ವಿನ್ಯಾಸ ಅಂತಿಮ ಗೊಳಿಸುವಲ್ಲಿ ಆಗಿರುವ ಹೆಚ್ಚಿನ ಸಮಯ.

7. ಜಲಾಶಯದಲ್ಲಿ ನೀರಿನ ಒಳಹರಿವಿನ ಪರಿಮಾಣ ಗಣನೀಯ ವಾಗಿ ಕಡಿಮೆ ಆಗಿದ್ದು, ಇದನ್ನು ಅಂತಿಮಗೊಳಿಸಿ ಹೊಸ ಅಂಗ ಯೋಜನೆಗಳನ್ನು ಕೈಗೆತ್ತಿಕೊಳ್ಳುವಲ್ಲಿ ಆದ ವಿಳಂಬ.

8. ಚುನಾವಣಾ ಸಂದರ್ಭದಲ್ಲಿ ನೀತಿ ಸಂಹಿತೆಯಡಿ ಹೊಸ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಲ್ಲಿನ ವಿಳಂಬ ಹಾಗೂ ಚುನಾವಣೆಗಾಗಿ ತಾಂತ್ರಿಕ ಅಧಿಕಾರಿಗಳ ನಿಯೋಜನೆ.

ಇ) ಈ ಯೋಜನೆಯ ಅನುಷ್ಠಾನದಲ್ಲಿ ಭ್ರಷ್ಟಾಚಾರದ/ಹಣ ದುರುಪಯೋಗದ ಒಟ್ಟು 19 ಪ್ರಕರಣಗಳು ಇವೆ.

ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಈ) ಕಾರಂಜಾ ಯೋಜನೆಯನ್ನು ಸಮರ್ಪಕವಾಗಿ 2011–12 ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಈ ಯೋಜನೆ ಪೂರ್ಣಗೊಂಡ ನಂತರ ದೊರಕುವ ತಾಲ್ಲೂಕುವಾರು ನೀರಾವರಿ ಸೌಲಭ್ಯ ದೊರಕುವ ವಿವರ ಹಾಗೂ ಕುಡಿಯುವ ನೀರಿನ ಸೌಲಭ್ಯದ ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ.	ತಾಲ್ಲೂಕಿನ ಹೆಸರು	ದೊರಕಲಿರುವ ನೀರಾವರಿ ಸೌಲಭ್ಯ (ಎಕರೆಗಳಲ್ಲಿ)	ಕುಡಿಯುವ ನೀರಿನ ಸೌಲಭ್ಯ
1.	ಬೀದರ್	4,564	ದೊರಕಲಿದೆ
2.	ಭಾಲ್ಕಿ	63,536	–
3.	ಬಸವಕಲ್ಯಾಣ	–	–
4.	ಔರಾದ್	–	–
5.	ಹುಮನಾಬಾದ್	4090	ದೊರಕಲಿದೆ
	ಒಟ್ಟು	**72,190**	

ಇಪ್ಪತ್ತಾರ

ಕ್ರಮ ಸಂಖ್ಯೆ	ಅಮಾನತ ಅಧಿಕಾರಿ/ನೌಕರರ ಹೆಸರು ಮತ್ತು ಹುದ್ದೆಯ	ಕೈಗೊಳ್ಳಲಾದ ಕ್ರಮದ ವಿವರ
1.	<u>ಶ್ರೀಯುತರು</u> ಸೈಯದ್ ಮಹಮ್ಮದ್ ಹುಸೇನ್, ಅ.ಇಂ(ವಿ)	ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯವರನ್ನು ನೇಮಕ ಮಾಡಲಾಗಿತ್ತು. ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ವಿಚಾರಣಾ ವರದಿ ಪರಿಶೀಲಿಸಿ ಮುಂದುವರೆದಿದೆ.
2.	ಬಿ.ಎ.ತಮಸಂಗ್,ಸ.ಇಂ ಭೀಮ್ಸಾ ರವೀಕುಮಾರ್,ಸ.ಇಂ ಮಲ್ಲಿಕಾರ್ಜುನ ಜಾಲಿಹಾಳ ಸ.ಇಂ., ರವೀಂದ್ರ ಬಿ.ಯರಗಾಳ, ಕಿ.ಇಂ., ಮು.ಅಜರುಲ್ಲಾಹ್ ಸಿದ್ದಿಕಿ, ಸ.ಇಂ., ಸೈಯದ್ ಸಾದತ್ ಅಲಿ, ಸ.ಇಂ., ರಾಜೇಂದ್ರ ಸ.ಇಂ., ಕರೀಮುದ್ದೀನ್, ಕಿ.ಇಂ ಪ್ರೇಮಸಿಂಗ್.ಸ.ಅ.ಇಂ., ಮ.ಶಫಿಯುದ್ದೀನ್, ಸ.ಇಂ., ಮೊಹಮ್ಮದ್ ಅಹ್ಮದ್ ಹುಸೇನ್,ಸ.ಇಂ. ಬಿ.ಆರ್. ಕುಲಕರ್ಣಿ, ಸ.ಇಂ., ಮಹಮುದ್ದೀನ್, ಕಿ.ಇಂ., ಅಶೋಕ್ ಕುಮಾರ್, ಕಿ.ಇಂ., ರಾಜಪ್ಪ ಪಾಟೀಲ್, ಸ.ಇಂ.	ದಿನಾಂಕ:25-4-2008ರಲ್ಲಿ ಇವರುಗಳಿಗೆ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮವಾಗಿ ಶಾಶ್ವತವಾಗಿ ತಡೆಹಿಡಿಯುವ ದಂಡನ ವಿಧಿಸಿ ದಿನಾಂಕ:25-4-2008ರಲ್ಲಿ ಆದೇಶ ಹೊರಡಿಸಿದೆ.
	ಪರಿಷರ ಸದಾಶಿವರಾವ್,ಅ.ಇಂ.,(ವಿ) ಪಿ.ಬಸವರಾಜ,ಕಿ.ಇಂ.,(ವಿ) ಪಾಂಡುರಂಗ,ಕಿ.ಇಂ.,(ವಿ) ವಿಶ್.ಟಿ.ಕುಲಕರ್ಣಿ,ಸ.ಅ.ಇಂ.(ವಿ) ಅರುಣ್‌ಕುಮಾರ್,ಕಿ.ಇಂ.,	ಇವರುಗಳ ಶರ್ತಬದ್ಧಪೋಷಣೆಗಾಗಿ ಇವರ ವಿರುದ್ಧ ವೇತನದಿಂದ ಶೇ.5ರಷ್ಟನ್ನು ಐದು ವರ್ಷಗಳವರೆಗೆ ತಡೆಹಿಡಿಯುವ ದಂಡನ ವಿಧಿಸಿ ದಿನಾಂಕ:20-4-2009ರಲ್ಲಿ ಆದೇಶ ಹೊರಡಿಸಿದೆ.
3.	ಪಸರುಲ್ಲಾ ಖಾನ್, ಅ.ಇಂ.,	ದಿನಾಂಕ:12-5-2008ರಲ್ಲಿ ಈಗಿನ ಅಧೀಕ್ಷಕ ಇಂಜಿನಿಯರ್ ಹುದ್ದೆಯಿಂದ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗೆ ಮತ್ತು ಕಾರ್ಯಪಾಲಕ ಇಂಜಿನಿಯರ್ ಹುದ್ದೆಯ ವೇತನ ಶ್ರೇಣಿ ರೂ.18,150-26,925ರಲ್ಲಿ ಕನಿಷ್ಠ ವೇತನ ರೂ.18,150/-ಗಳ ಮೂಲ ವೇತನಕ್ಕೆ ಎರಡು ವರ್ಷಗಳ ಅವಧಿಗೆ ಕೆಳಗಿಳಿಸುವ ದಂಡನ ವಿಧಿಸಿ ದಿನಾಂಕ:12-5-2008ರಲ್ಲಿ ಆದೇಶ ಹೊರಡಿಸಿದೆ.
	ಅಶೋಕಯೋಜನಾಧಿಕಾರಿ,ಪ್ರ.ದ.ಅ.ಪಾ.	ಇವರಿಗೆ ಇದೇ ವೇತನ ಶ್ರೇಣಿಯ ವಾರ್ಷಿಕ ವೇತನ ಬಡ್ತಿಯಲ್ಲಿ ಒಂದು ಹಂತವನ್ನು ಒಂದು ವರ್ಷದ ಅವಧಿಯವರೆಗೆ ಕೆಳಗಿಳಿಸುವ ದಂಡನ ವಿಧಿಸಿ ದಿನಾಂಕ:12-5-2008ರಲ್ಲಿ ಆದೇಶ ಹೊರಡಿಸಿದೆ.
	ವಿಶ್.ವಿಶ್.ಪಾಟೀಲ್, ಸ.ಅ.ಇಂ.	ಇವರಿಗೆ ಇದೇ ವೇತನ ಶ್ರೇಣಿಯ ವಾರ್ಷಿಕ ವೇತನ ಬಡ್ತಿಯಲ್ಲಿ ಒಂದು ಹಂತವನ್ನು ಒಂದು ವರ್ಷದ ಅವಧಿಯವರೆಗೆ ಕೆಳಗಿಳಿಸುವ ದಂಡನ ವಿಧಿಸಿ ದಿನಾಂಕ:12-5-2008ರಲ್ಲಿ ಆದೇಶ ಹೊರಡಿಸಿದೆ.
	ದಯಾನಂದಸ್ವಾಮಿ, ಪ್ರ.ದ.ಅ.ಪಾ.	ಇವರಿಗೆ ಇದೇ ವೇತನ ಶ್ರೇಣಿಯ ವಾರ್ಷಿಕ ವೇತನ ಬಡ್ತಿಯಲ್ಲಿ ಎರಡು ಹಂತವನ್ನು ಎರಡು ವರ್ಷಗಳ ಅವಧಿಯವರೆಗೆ ಕೆಳಗಿಳಿಸುವ ದಂಡನ ವಿಧಿಸಿ ದಿನಾಂಕ:12-5-2008ರಲ್ಲಿ ಆದೇಶ ಹೊರಡಿಸಿದೆ.
	ಗುಂಡಪ್ಪ ಮಾಡಗೋಳ,ವೆಕ್ಕೆ ಅಧೀಕ್ಷಕರು	ಇವರಿಗೆ ಇದೇ ವೇತನ ಶ್ರೇಣಿಯ ವಾರ್ಷಿಕ ವೇತನ ಬಡ್ತಿಯಲ್ಲಿ ಒಂದು ಹಂತವನ್ನು ಒಂದು ವರ್ಷದ ಅವಧಿಯವರೆಗೆ ಕೆಳಗಿಳಿಸುವ ದಂಡನ ವಿಧಿಸಿ ದಿನಾಂಕ:12-5-2008ರಲ್ಲಿ ಆದೇಶ ಹೊರಡಿಸಿದೆ.

	ಪೈಜ್ ಶೇಷಗಿರಿ,ಸ.ಅ.ಇಂ.(ವಿ) ಟಿ.ಎಸ್.ಪದ್ಮಶೆಟ್ಟಿ,ಸ.ಅ.ಇಂ.(ವಿ) ಟಿ.ವಿ.ಮಾಣ್ಯಾಳ್ಕರ್,ಅ.ಇಂ.,(ವಿ) ಕೆ.ಎಸ್.ಪಂಚಮುಖಿ,ಅ.ಇಂ(ವಿ) ಜಾಜಾಮಂಡಾಜಿ,ಸ.ಅ.ಇಂ(ವಿ). ಎಸ್.ಶ್ರೀನಿವಾಸ್,ಸ.ಅ.ಇಂ(ವಿ). ಟಿ.ವಿಶ್ವನಾಥ್,ಅ.ಇಂ.(ವಿ)(ವಿಧವ).	ಇವರುಗಳ ವಿರುದ್ಧ ಸಕ್ಷಮ ನ್ಯಾಯಾಲಯದಲ್ಲಿ ಪಿಟಿಲ್ ದಾವೆ ಹೂಡಲು ದಿನಾಂಕ:04–09–2010ರಲ್ಲಿ ಸರ್ಕಾರಿ ವಕೀಲರನ್ನು ಬೇಮಕ ಮಾಡಲಾಗಿದೆ.
4.	ಜಾಜಾಮಂಡಾಜಿ, ಸ.ಅ.ಇಂ.(ವಿ) ಮಧುಕರ ಕುಲಕರ್ಣಿ, ಸ.ಅ.ಇಂ.(ವಿ)	ಇವರುಗಳಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟವನ್ನು ಸರಿ ರೂ.14,72,789–50ಗಳನ್ನು ಇವರ ವಿಮೃತಿ ಸೌಲಭ್ಯಗಳಿಂದ ಮರುಪಡೆ ಮಾಡಲು ಹಾಗೂ ಬಾಕಿ ಉಳಿದಲ್ಲಿ ಸದರಿ ಮೊತ್ತವನ್ನು ಅವರ ವಿರುದ್ಧ ಸಕ್ಷಮ ನ್ಯಾಯಾಲಯದಲ್ಲಿ ಪಿಟಿಲ್ ದಾವೆ ಹೂಡಲು ಹಾಗೂ ಇವರ ಕರ್ತವ್ಯ ಲೋಪಕ್ಕಾಗಿ ವಿಮೃತಿ ವೇತನದಲ್ಲಿ ಶೇ.10ರಷ್ಟನ್ನು 10 ವರ್ಷದವರೆಗೆ ಕಡಿತಮಾಡುವ ದಂಡನೆ ವಿಧಿಸಿ ದಿನಾಂಕ:27–3–2010ರಲ್ಲಿ ಆದೇಶ ಹೊರಡಿಸಿದೆ.
5.	ಬಸವರಾಜ ಸಂಗಾಪುರ. ಸ.ಅ.ಇಂ	ಇವರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ.2,41,000/–ಗಳಿಗೆ ಶೇ.8ರಷ್ಟು ಬಡ್ಡಿಯನ್ನು ಸೇರಿಸಿ ಒಟ್ಟು ಮೊತ್ತದಲ್ಲಿ ಶೇ.20ರಷ್ಟನ್ನು ಇವರ ವೇತನದಿಂದ ಮರುಪಡೆ ಮಾಡುವ ಹಾಗೂ ರೂ.45,598/–ಗಳಿಗೆ ಶೇ.8ರಷ್ಟು ಬಡ್ಡಿಯನ್ನು ಸೇರಿಸಿ ಒಟ್ಟು ಮೊತ್ತದಲ್ಲಿ 1/3ರಷ್ಟನ್ನು ಅವರ ವೇತನದಲ್ಲಿ ಪಡೆದುಕೊಳ್ಳುವ ಮತ್ತು ಅವರ ಒಂದು ವಾರ್ಷಿಕ ವೇತನ ಬಡ್ಡಿಯನ್ನು ಸಂಚಿತ ಪರಿಣಾಮ ರಹಿತವಾಗಿ ಪಡೆದುಕೊಳ್ಳುವ ದಂಡನೆ ವಿಧಿಸಿ ದಿನಾಂಕ:4–6–2008ರಲ್ಲಿ ಆದೇಶ ಹೊರಡಿಸಿದೆ.
	ಪಟ್ಟಣಶೆಟ್ಟಿ ಪಾಂಡುರಂಗ, ಸ.ಇಂ (ವಿಧವ)	ಇವರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ.2,41,000/–ಗಳಿಗೆ ಶೇ.8ರಷ್ಟು ಬಡ್ಡಿಯನ್ನು ಸೇರಿಸಿ ಒಟ್ಟು ಮೊತ್ತದಲ್ಲಿ ಶೇ.20ರಷ್ಟನ್ನು ಅವರ ಪಿಂಚಣಿ ಸೌಲಭ್ಯದಿಂದ ಕಡಿತಮಾಡುವ ಹಾಗೂ ರೂ.45,598/–ಗಳಿಗೆ ಶೇ.8ರಷ್ಟು ಬಡ್ಡಿಯನ್ನು ಸೇರಿಸಿ ಒಟ್ಟು ಮೊತ್ತದಲ್ಲಿ 1/3ರಷ್ಟನ್ನು ಪಿಂಚಣಿ ಸೌಲಭ್ಯದಿಂದ ಕಡಿತಮಾಡುವ ದಂಡನೆ ವಿಧಿಸಿ ದಿನಾಂಕ:4–6–2008ರಲ್ಲಿ ಆದೇಶ ಹೊರಡಿಸಿದೆ.
	ಅಲೋಕ ಡೋಯಿಫೋಡೆ ಪ್ರಥಮ ದರ್ಜೆ ಅಗ್ರಾಣಿ ಪಾಲಕರು	ಇವರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ.2,41,000/–ಗಳಿಗೆ ಶೇ.50ರಷ್ಟನ್ನು ಅವರ ವೇತನದಿಂದ ಕಡಿತಮಾಡುವ ಹಾಗೂ ರೂ.45,598/–ಗಳಿಗೆ ಶೇ.8ರಷ್ಟು ಬಡ್ಡಿ ಸೇರಿಸಿ ಅವರ ವೇತನದಲ್ಲಿ ಪಡೆದುಕೊಳ್ಳುವ ಮತ್ತು ಇವರ ಹಾಲಿ ವೇತನ ಶ್ರೇಣಿ 2 ಹಂತವನ್ನು ಮೂರು ವರ್ಷದವರೆಗೆ ತಡೆಗಟ್ಟುವ ದಂಡನೆ ವಿಧಿಸಿದಿನಾಂಕ:4–6–2008ರಲ್ಲಿ ಆದೇಶ ಹೊರಡಿಸಿದೆ.
	ಮಹ್ಮದ್ ಖಾಜಾ,ಕಾವಲುಗಾರ(ವಿಮೃತ)	ಸರ್ಕಾರದ ಆದೇಶ ಸಂಖ್ಯೆ:ಇಸಂಇ 83 ಸೇಆವಿ 96(ಭಾ), ದಿನಾಂಕ:4–6–2008ರಲ್ಲಿ ಇವರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ.2,41,000/–ಗಳಿಗೆ ಶೇ.8ರಷ್ಟು ಬಡ್ಡಿಯನ್ನು ಸೇರಿಸಿ ಒಟ್ಟು ಮೊತ್ತದಲ್ಲಿ ಶೇ.10ರಷ್ಟನ್ನು ಅವರ ವಿಮೃತಿ ಸೌಲಭ್ಯದಿಂದ ಕಡಿತಮಾಡುವ ಹಾಗೂ ಇವರ ಪಿಂಚಣಿಯಿಂದ ರೂ.100/–ಗಳನ್ನು ಮುಂದಿನ ಮೂರು ವರ್ಷಗಳ ವರೆಗೆ ಪಡೆದುಕೊಳ್ಳುವ ದಂಡನೆ ವಿಧಿಸಿ ದಿನಾಂಕ:4–6–2008ರಲ್ಲಿ ಆದೇಶ ಹೊರಡಿಸಿದೆ.
	ಎಲ್.ಎ.ವಿಶ್ವನಾಥ್,ಕಲೆಕ ಸಹಾಯಕ ಮುಜೀದ್,ಕಾವಲುಗಾರ ಅಬ್ದುಲ್ ಹಮೀದ್,ಕಾವಲುಗಾರ ಗಣಪತಿ, ಕಾವಲುಗಾರ ಹನುಮಂತ,ಕಾವಲುಗಾರ	ಇವರುಗಳ ಮೇಲಿನ ಆರೋಪಪಟ್ಟಿ ವಿಚಾರಣೆಯಿಂದ ಸಾಬೀತಾಗಿಲ್ಲದ ಕಾರಣ ಇವರುಗಳನ್ನು ಆರೋಪದಿಂದ ದೋಷಮುಕ್ತರನ್ನಾಗಿ ಮಾಡಿ ದಿನಾಂಕ:4–6–2008ರಲ್ಲಿ ಆದೇಶ ಹೊರಡಿಸಿದೆ.
6.	ಶಂಕರಪ್ಪ ಸುರಪುರ,ಸ.ಕಾ.ಇಂ(ವಿ). ಪಿ.ಬಿ.ಪಂಡೂರ್,ಸ.ಕಾ.ಇಂ(ವಿ). ಗುಂಶೀರಅಹಮದ್,ಸ.ಅ.ಇ(ವಿ).	ಇವರುಗಳ ಕರ್ತವ್ಯಲೋಪಕ್ಕೆಸಗಿರುವ ಆಪಾದನೆಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ಪಡೆಸಿ ಇಲಾಖಾ ವಿಚಾರಣೆಯಲ್ಲಿ ಆರೋಪ ಸಾಬೀತಾಗದೇ ಇರುವುದರಿಂದ

	ಪಂಚೇಗೌಡ, ಪ.ಜಾ.ಪ. ಪಟ್ಟಾ ರವಿಕುಮಾರ್, ಪ.ಜಾ. ಗುಂಡಪ್ಪನವರುಗಳ,ಬೆಳ್ಳ ಅಧಿಕಾರ್ಯರು ವೀರಶಟ್ಟಿ, ಬೆಳ್ಳಾಧಿಕಾರ್ಯರು(ವಿ).	ದಿನಾಂಕ:28-8-2009ರ ಸರ್ಕಾರದ ಆದೇಶದಲ್ಲಿ ಇವರುಗಳನ್ನು ಅಮಾನತುಗೊಳಿಸಿದ ದೋಷಾರೋಪ್ಯ ದಾಖಲಿಸಿದ.
	ಎಸ್.ಎಲ್.ಮೈತ್ರಿ, ಪ.ಜಾ.ಇಂ(ವಿ) ಎಸ್.ಎ.ಷಫಿಅಹಮದ್,ಪ.ಜಾ.ಇಂ(ವಿ). ಲಕ್ಷ್ಮಣ್,ಪ.ಜಾ.ಇ. ಹೆಚ್.ಆರ್.ಶ್ರೀನಿವಾಸ್,ಪ.ಜಾ.ಇಂ. ಪಿ.ಎಸ್.ಬಾಬಾಜಾನ್,ಪ.ಜಾ.ಇಂ.(ವಿ) ಮೋಹನ್ ರಾಜ್,ಜಿಲ್ಲಾಧಿಕಾರಿ ದೇವೇಂದ್ರಪ್ಪ, ಬೆಳ್ಳ ಅಧಿಕಾರ್ಯರು	ಇವರುಗಳು ಕರ್ತವ್ಯದೋಷಪತ್ರಗಳಿಗೆ ಉತ್ತರಿಸಿರುವಂತೆ ಇಲಾಖಾ ವಿಚಾರಣೆಯಲ್ಲಿ ಆರೋಪ ಸಾಬೀತಾಗದೇ ಇರುವುದರಿಂದ ದಿನಾಂಕ:24-10-2010ರ ಸರ್ಕಾರದ ಆದೇಶದಲ್ಲಿ ಇವರುಗಳನ್ನು ಅಮಾನತಿಗೆ ಕುರಿತ ದೋಷಾರೋಪ್ಯ ದಾಖಲಿಸಿದ.
	ಎಸ್.ಕೆ.ಗಾಯಿತ್ರಿಅಮ್ಮ,ಪ.ಜಾ.ಇಂ(ವಿ) ಹರಿಪ್ರಸಾದ ಸೂಡಿಪುಡಿ,ಪ.ಜಾ.ಇಂ.(ವಿ) ಎಸ್.ಪುಟ್ಟಸ್ವಾಮಿ,ಪ.ಜಾ.ಇಂ(ವಿ)	ಇವರುಗಳ ವಿರುದ್ಧ ಇಲಾಖಾ ವಿಚಾರಣೆ ಯನ್ನು ಪರಿಷಲು ವಿಚಾರಣಾಧಿಕಾರಿ ಗಳನ್ನು ನೇಮಕ ಮಾಡಲಾಗಿದ್ದು, ವಿಚಾರಣಾಧಿಕಾರಿಗಳು ವಿಚಾರಣೆ ಪರಿಷಿ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಪರದಿ ಪರಿಶೀಲನೆ ಯಲ್ಲಿದೆ.
7.	1. ಹರಿಪ್ರಸಾದ ಸೂಡಿಪುಡಿ,ಪ.ಜಾ.ಇಂ(ವಿ) 2. ಬಿ.ಎಸ್.ಬಾಬಾಜಾನ್,ಪ.ಜಾ.ಇ. 3. ಲಕ್ಷ್ಮಣ,ಪ.ಜಾ.ಇ 4. ಸೋಮಶೇಖರ ಕೆಂಚಪ್ಪ,ಪ.ಜಾ. 5. ವಿದ್ಯಾಶಂಕರ, ತಿ.ಇ. 6. ಸುಧಾಕರ್,ತಿ.ಇ. 7. ಆಕ್ಷಯ್ ಆದಿತಿ, ತಿ.ಇ ತಿ.ಜಗನ್ನಾಥರಾವ್,ಬೆಳ್ಳಪರಿವೀಕ್ಷಣಾಧಿಕಾರಿ	ಇವರುಗಳ ವಿರುದ್ಧ ಇಲಾಖಾ ವಿಚಾರಣೆ ಪರಿಷಲು ವಿಚಾರಣಾಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, ಇಲಾಖಾ ವಿಚಾರಣೆ ಪರಿಷಿ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ವಿಚಾರಣಾ ವರದಿಯು ಪರಿಶೀಲನೆಯಲ್ಲಿದೆ.
8.	1. ಅವಿರೋಧಾಜ್ ಗದ್ದಿಗೌಡರ್, ಪ.ಜಾ.ಇ 2. ಎಸ್.ಎ.ರ್ಗಗ,ಬೆಳ್ಳಪರಿವೀಕ್ಷಣಾಧಿಕಾರಿ	ಇವರುಗಳ ವಿರುದ್ಧ ಇಲಾಖಾ ವಿಚಾರಣೆ ಪರಿಷಿ ಇಲಾಖಾ ವಿಚಾರಣೆಯಲ್ಲಿ ಆರೋಪಗಳು ಸಾಬೀತಾಗದೇ ಇರುವುದರಿಂದ ದಿನಾಂಕ:29-12-2010 ರಲ್ಲಿ ಇವರುಗಳನ್ನು ಆಪಾದನೆಗಳಿಂದ ದೋಷಮುಕ್ತ ರನ್ನಾಗಿಸಿದ.
9.	1. ಬಸವರಾಜ್ ಹರಿಪೂರ, ಪ.ಇಂ., 2. ರಾಮಚಂದ್ರ, ತಿ.ಇ.,	ಇವರಿಂದ ಸರ್ಕಾರಕ್ಕೆ ವಂಚನೆಗಾಗಿರುವ ಅಧಿಕ ಹಣ ರೂ.5,30,419/-ಗಳನ್ನು ಇವರ ವೇತನದಿಂದ ವಸೂಲಿ ಮಾಡಲು ಹಾಗೂ ಇವರ ಕರ್ತವ್ಯ ದೋಷಕ್ಕಾಗಿ ಅವರ ವಿರುದ್ಧ ಇಲಾಖೆಗೆ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮವಿಲ್ಲದಂತೆ ಪರಿಷಿಯುವ ದಂಡನೆ ವಿಧಿಸಿ ದಿನಾಂಕ:11-3-2010ರಲ್ಲಿ ಆದೇಶ ಹೊರಡಿಸಿದ.
10.	1. ಹರಿಪ್ರಸಾದ ಸೂಡಿಪುಡಿ, ಪ.ಜಾ.ಇಂ(ವಿ) 2. ರಾಜಾರಾಂಗ್, ಪ.ಜಾ.ಇ 3. ಎಸ್.ಟಿ.ಶೇಖರ್ಪ್ಪ, ಪ.ಜಾ.ಇಂ(ವಿ)	ಇವರುಗಳ ವಿರುದ್ಧ ಇಲಾಖಾ ವಿಚಾರಣೆ ಪರಿಷಲು ವಿಚಾರಣಾಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, ಇಲಾಖಾ ವಿಚಾರಣೆ ಪರಿಷಿ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ವಿಚಾರಣಾ ವರದಿಯು ಪರಿಶೀಲನೆಯಲ್ಲಿದೆ.
11.	1. ಗಿರೀಶ್ ಉಮಾಪತಿ,ಪ.ಜಾ.ಇ.	ಇವರ ವಿರುದ್ಧ ಇಲಾಖಾ ವಿಚಾರಣೆ ಪರಿಷಲು ವಿಚಾರಣಾಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, ಇಲಾಖಾ ವಿಚಾರಣೆ ಪರಿಷಿ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ವಿಚಾರಣಾ ವರದಿಯು ಪರಿಶೀಲನೆಯಲ್ಲಿದೆ.
	2. ಕೆ.ಹನುಮಂತಪ್ಪ,ಪ.ಜಾ.ಇಂ(ವಿ) 3. ಬಿ.ಡಿ.ಹಾಲಸ್ವಾಮಿ, ಪ.ಇಂ(ವಿ) 4. ವಿ.ಟಿ.ಪರಮೆಶ, ಪ.ಜಾ.ಇಂ.(ವಿ) 5. ಕೆ.ವಿ.ಶಂಕರನಾರಾಯಣ, ಮು.ಇಂ(ವಿ) 6. ಪಾಂಡುರಂಗ ಬಾಬಾಜಿ, ಪ.ಜಾ.ಇಂ(ವಿ) 7. ಸೈಯದ್ ಮಹಮೂದ್ ಹುಸೇನ್, ಪ.ಇಂ(ವಿ) 8. ಎಸ್.ಕೆ.ಗಾಯಿತ್ರಿಅಂಬ, ಪ.ಪ.ಇಂ(ವಿ)	ಇವರುಗಳ ವಿರುದ್ಧ ಸಕ್ಷಮ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಹೂಡಲು ದಿನಾಂಕ:09-02-2010ರಲ್ಲಿ ಸರ್ಕಾರಿ ವಕೀಲರನ್ನು ನೇಮಕ ಮಾಡಲಾಗಿದೆ.
12.	1. ಎಸ್.ಕೃಷ್ಣಮೂರ್ತಿ,ಪ.ಇಂ 2. ಬಿ.ಎಲ್.ಚಂದ್ರ, ಪ.ಇಂ 3. ವಿ.ಡಿ.ಹೂಜಾರಿ, ತಿ.ಇಂ	ಇವರುಗಳ ವಿರುದ್ಧ ಇಲಾಖಾ ವಿಚಾರಣೆ ಪರಿಷಲು ಸರ್ಕಾರದ ಆದೇಶ ದಿನಾಂಕ:13-01-2009ರಲ್ಲಿ ಶ್ರೀ ಬಿ.ವಿ. ಶೇಟ್, ವಿಶೇಷ ಜಿಲ್ಲಾ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ

	4. ಹೆಚ್.ಎಂ.ಜ್ಞಾನಪ್ರಕಾಶ್,ಆ.ಪ್ರ. 5. ಚಂದ್ರಶೇಖರ, ಶಾ.ಪ್ರ. 6. ಎಂ.ಎಸ್.ಪಾಗಲಾಪುರ್, ಶಾ.ಇಂ 7. ಮರಳುಸಿದ್ ಸುಧಾಕರ್, ಶಾ.ಇಂ 8. ದಯಾಪಾಲ್, ಶಾ.ಪ್ರ 9. ಎಸ್.ಮುರಳೀಧರ, ಪ.ಶಾ.ಇಂ 10.ಬಿ.ಎಸ್.ಹಾಲೇಲ್,ಪ.ಶಾ.ಇಂ 11.ಮಹಮ್ಮದ್ ಅಸೀಫ್ ಅಹ್ಮದ್,ಪ್ರ.ಇಂ	ಮಾಡಲಾಗಿದೆ. ವಿಚಾರಣೆ ಪೂರ್ಣಗೊಂಡಿದೆ.
13.	ಬಿ.ಎಸ್.ಜಯಶ್ರೀ,ಅ.ಇಂ(ವಿ)	ಇವರ ವಿರುದ್ಧ ಸಲ್ಲಿಸಿದ ಖಾಸಗಿ ದೂರನ್ನು ಲೋಕಾಯುಕ್ತ ಪೊಲೀಸ್ ಠಾಣೆ ಮೂಲಕ ತನಿಖೆ ಕೈಗೊಳ್ಳಲಾಗಿದೆ. ಓ.ಎಸ್. ಪ್ರ. 49/09
14.	1. ಪರಿಷತ್ ಸದಾಶಿವರಾವ್,ಶಾ.ಇಂ(ವಿ) 2. ಜೆ.ಎಂ.ಚಾಕಿವಿಮಠ,ಶಾ.ಇಂ(ವಿ) 3. ಜೆ.ಸಿ.ಮಧುಸೂದನ,ಶಾ.ಇಂ(ವಿ) 4. ಎಸ್.ಪಿ. ಅಹ್ಮದ್,ಶಾ.ಇಂ(ವಿ) 5. ಸೈಯದ್ ಹುಸೇನ್,ಪ.ಶಾ.ಇಂ(ವಿ) 6. ವಿ.ಕೆ.ಭಾಗ್ಯಶ್ರೀ,ಶಾ.ಇಂ.(ವಿ) 7. ಹೆಚ್.ಪರಮೇಶ್ವರ,ಶಾ.ಇಂ(ವಿ) 8. ಎಂ.ರುಥ್,ಬಾಲರ್,ಶಾ.ಇಂ.(ವಿ)	ಇವರುಗಳ ವಿರುದ್ಧ ಸಲ್ಲಿಸಿದ ಖಾಸಗಿ ದೂರನ್ನು ಲೋಕಾಯುಕ್ತ ಪೊಲೀಸ್ ಠಾಣೆ ಮೂಲಕ ತನಿಖೆ ಕೈಗೊಳ್ಳಲು ದಿನಾಂಕ:23-03-2010ರಲ್ಲಿ ಸರ್ಕಾರಿ ಪತ್ರವನ್ನು ನೀಡಿದೆ ಮುಂದಿನ ಕ್ರಮ ಜರುಗಿಸಲಾಗಿದೆ.
15.	1. ವಿ.ಜಿ.ಹೆಗಡೆ, ಶಾ.ಇಂ.(ವಿ) 2. ಕೆ.ಹನುಮಂತಪ್ಪ, ಶಾ.ಇಂ(ವಿ) 3. ಪಾಂಡುರಂಗ ಬರಾಡಾಳ್,ಶಾ.ಇಂ(ವಿ)	ಇವರುಗಳ ವಿರುದ್ಧ ಸಲ್ಲಿಸಿದ ಖಾಸಗಿ ದೂರನ್ನು ಲೋಕಾಯುಕ್ತ ಪೊಲೀಸ್ ಠಾಣೆ ಮೂಲಕ ತನಿಖೆ ಕೈಗೊಳ್ಳಲಾಗಿದೆ. ಓ.ಎಸ್. ಪ್ರ. 68/09, ಓ.ಎಸ್. ಪ್ರ. 51/09, ಓ.ಎಸ್. ಪ್ರ. 67/09
16.	1. ಕೆ.ಹನುಮಂತಪ್ಪ, ಶಾ.ಇಂ(ವಿ) 2. ಜೆ.ಎಸ್.ಮುರಳಿಧರ, ಶಾ.ಇಂ(ವಿ) 3. ವಿ.ಹೆಚ್.ಆರಾಧ್ಯೆ, ಅ.ಇಂ.(ವಿ) 4. ಪಾಂಡುರಂಗ ಬರಾಡಾಳ್, ಶಾ.ಇಂ(ವಿ) 5. ಸೈಯದ್ ಹುಸೇನ್, ಪ.ಶಾ.ಇಂ(ವಿ) 6. ಸೂರ್ಯಕಾಂತ, ಪ.ಶಾ.ಇಂ(ವಿ)	ಇವರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ.
17.	1. ವಿ.ಹೆಚ್.ಆರಾಧ್ಯೆ, ಅ.ಇಂ(ವಿ) 2. ಕೆ.ವಿಜಯರಾವ್,ಅ.ಇಂ(ವಿ) 3. ಎಸ್.ಕೆ.ಪೀಸಾಮಿ,ಶಾ.ಇಂ(ವಿ) 4. ಜೆ.ಎಂ.ಸುರಾಪಿಮಠ,ಶಾ.ಇಂ(ವಿ) 5. ಕೆ.ಹನುಮಂತಪ್ಪ,ಶಾ.ಇಂ(ವಿ) 6. ಎಂ.ಬಿ.ಮೇಳಕುರಿಕ್ಕಿ,ಶಾ.ಇಂ(ವಿ) 7. ಪಿ. ಸಿದ್ಧಪ್ಪ,ಶಾ.ಇಂ(ವಿ) 8. ಹೆಚ್.ಮಂಡಲೀಕ್, ಶಾ.ಇಂ(ವಿ) 9. ಎಸ್.ಕೆ.ಗಾಯಕವಾಡ್, ಪ.ಶಾ.ಇಂ(ವಿ) 10. ಬಿ.ಶಂಕರಪ್ಪ,ಪ.ಶಾ.ಇಂ	ಇವರುಗಳ ವಿರುದ್ಧ ಇಲಾಖಾ ವಿಚಾರಣೆ ಪರಿಷತ್ ವಿಚಾರಣೆಯಲ್ಲಿ ಆರೋಪವು ಸಾಬೀತಾಗಿದೆ ಇರುವುದರಿಂದ ದಿನಾಂಕ:27-10-2007ರ ಸರ್ಕಾರದ ಆದೇಶದಲ್ಲಿ ಅವರುಗಳನ್ನು ಆರೋಪ ಮುಕ್ತ ಮಾಡಿ ಮುಂದಿನ ಕ್ರಮ ಜರುಗಿಸಲಾಗಿದೆ.
19.	4. ವಿ.ಕೆ.ಭಾಗ್ಯಶ್ರೀ, ಶಾ.ಇಂ(ವಿ) 5. ಕೆ.ಎಸ್.ಚಂದ್ರಶೇಖರ್, ಶಾ.ಇಂ(ವಿ) 6. ಎಂ.ವಿ.ಭಾಗ್ಯಶ್ರೀ, ಶಾ.ಇಂ(ವಿ) 7. ಎಸ್.ರಾಮಚಂದ್ರ, ಶಾ.ಇಂ(ವಿ) 8. ಎಂ.ಬಿ.ಮುದಿಯಪ್ಪಸವರ, ಅ.ಇಂ(ವಿ) 9. ವೈಜಂತಿ ಬಿಮಳೇಖರ್, ಶಾ.ಇಂ(ವಿ) 10. ವಿ.ಹೆಚ್.ಆರಾಧ್ಯೆ, ಶಾ.ಇಂ(ವಿ) 11. ಎಂ.ಬಿ.ಮೇಳಕುರಿಕ್ಕಿ, ಶಾ.ಇಂ(ವಿ) 12. ಪಿ.ಎಸ್.ಬೆಂಕಟೂರ, ಪ.ಶಾ.ಇಂ(ವಿ) 13. ನಾರಾಯಣ, ಪ.ಶಾ.ಇಂ(ವಿ) 14. ವಿ.ಪಳನಿವೇಲ್, ಪ.ಶಾ.ಇಂ(ವಿ) 15. ಪಿ.ಬಿ.ಪಂಡೂರ,ಪ.ಶಾ.ಇಂ(ವಿ) 16. ಶೇಖ ಅಲ್ಲಿ, ಪ.ಶಾ.ಇಂ(ವಿ)	ಇವರುಗಳ ವಿರುದ್ಧ ಸಲ್ಲಿಸಿದ ಖಾಸಗಿ ದೂರನ್ನು ಲೋಕಾಯುಕ್ತ ಪೊಲೀಸ್ ಠಾಣೆ ಮೂಲಕ ತನಿಖೆ ಕೈಗೊಳ್ಳಲು ಕ್ರಮ ಜರುಗಿಸಲಾಗಿದೆ.

ಇ.	1. ಎಂ.ಬಿ.ಮುದಿಯಪ್ಪಸವರ,ಅ.ಇಂ(ವಿ) 2. ಬಿ.ಆರ್.ಬದಾಮಿ, ಅ.ಇಂ(ವಿ) 3. ಸಿದ್ಧರಾಮಪ್ಪ.ಅ.ಇಂ(ವಿ) 4. ಸೈಯದ್ ಮೊಹಮದ್ ಹುಸೇನ್, ಅ.ಇಂ(ವಿ) 5. ಕೆ.ವಿಜಯಕುಮಾರ್,ಅ.ಇಂ.(ವಿ) 6. ವಿ.ಜೆಡ್.ಅಗರವಾಲ್,ಅ.ಇಂ(ವಿ)	ಇವರುಗಳ ವಿರುದ್ಧ ಸಕ್ಷಮ ನ್ಯಾಯಾಲಯದಲ್ಲಿ ಪಿರಿಕ್ ದಾವೆ ಹೂಡಲು ದಿನಾಂಕ:28-10-2005ರಲ್ಲಿ ಸರ್ಕಾರ ನಿರ್ಣಯವನ್ನು ಪೇಮಿಸ ಮಾಡಲಾಗಿದೆ.

ವಿ.ಸೂ.: (1) ಮು.ಇಂ.: ಮುಖ್ಯ ಇಂಜಿನಿಯರ್,
(2) ಅ.ಇಂ.: ಅಧೀಕ್ಷಕ ಇಂಜಿನಿಯರ್,
(3) ಕಾ.ಇಂ.: ಕಾರ್ಯಪಾಲಕ ಇಂಜಿನಿಯರ್,
(4) ಪ.ಕಾ.ಇಂ.: ಪದನಾಮ ಕಾರ್ಯಪಾಲಕ ಇಂಜಿನಿಯರ್,
(5) ಪ.ಇಂ.: ಪದನಾಮ ಇಂಜಿನಿಯರ್,
(6) ಕಿ.ಇಂ.: ಕಿರಿಯ ಇಂಜಿನಿಯರ್,
(7) ಪ್ರ.ದ.ಅ.ಪಾ.: ಪ್ರಥಮ ದರ್ಜೆ ಅಧಿಕೃತ ಪಾಲಕ.

(ಮಹಾಂತೇಶ ಮುಳ್ಳೂರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ (ಇತರೆ)(ನೀರಾವರಿ-ಎ).

ಬಿಜಾಪುರ ಜಿಲ್ಲೆಯಲ್ಲಿ ಮಳೆಯಿಂದಾಗಿ ಸ್ಥಳಾಂತರಗೊಂಡ ಗ್ರಾಮಗಳ ಬಗ್ಗೆ

6(2): ಶ್ರೀ ಪಾಟೀಲ್ ಎ.ಎಸ್ (ನಡಹಳ್ಳಿ) (ದೇವರ ಹಿಪ್ಪರಗಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪೂರ ಜಿಲ್ಲೆಯಲ್ಲಿ 2009 ನೇ ಸಾಲಿನ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಬಿದ್ದ ಭಾರಿ ಮಳೆಯಿಂದಾಗಿ ದೇವರ ಹಿಪ್ಪರಗಿ ವ್ಯಾಪ್ತಿಯಲ್ಲಿ ಎಷ್ಟು ಗ್ರಾಮಗಳು ಸ್ಥಳಾಂತರಗೊಂಡಿವೆ; ಅವು ಯಾವುವು?

ಆ) ಸದರಿ ಗ್ರಾಮಗಳ ಸ್ಥಳಾಂತರಕ್ಕೆ ಎಷ್ಟು ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ; ಸದರಿ ರೈತರಿಗೆ ಪರಿಹಾರ ನೀಡಲಾಗಿದೆಯೇ; ಹಾಗಿದ್ದಲ್ಲಿ, ಯಾವ ರೈತರಿಗೆ ಎಷ್ಟು ಪರಿಹಾರ ನೀಡಲಾಗಿದೆ? (ವಿವರಗಳನ್ನು ನೀಡುವುದು)

ಇ) ಸ್ಥಳಾಂತರಗೊಂಡ ಗ್ರಾಮಗಳಲ್ಲಿ ಸರ್ಕಾರದಿಂದ ಅಥವಾ ಖಾಸಗಿಯವರಿಂದ ಮನೆ ಕಟ್ಟಡ ಕಾಮಗಾರಿ ಪ್ರಾರಂಭ ಮಾಡಲಾಗಿದೆಯೇ: ಪ್ರಾರಂಭ ಮಾಡಿದ್ದಲ್ಲಿ ಕಟ್ಟಡ ಕಾಮಗಾರಿಯನ್ನು ಗ್ರಾಮವಾರು ಯಾರಿಗೆ ವಹಿಸಲಾಗಿದೆ?